ಇಲ್ಲಿ ಗಮನಿಸಬೇಕು ಪ್ರವಾಹಕಾಲದಲ್ಲಿ ದೋಣಿ ಮುಳುಗಿಹೋಗಿದ್ದರೆ ಅದು ಪ್ರವಾಹದಿಂದ ಆದ ಘಟನೆ ಎಂದು ಹೇಳಬಹುದಿತ್ತು. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಸುಮಾರು 20-30 ವರ್ಷಗಳವರೆಗೆ ಇವರುಗಳು ದೋಣಿಗಳನ್ನು ಉಪಯೋಗಿಸುತ್ತಿರುತ್ತಾರೆ. ಅವು ಸರಿಯಾದ ಸ್ಥಿತಿಯಲ್ಲಿರುವುದಿಲ್ಲ. ಸಂಬಂಧಪಟ್ಟ ಇಲಾಖೆಯವರು ಪ್ರತಿವರ್ಷ ಈ ದೋಣಿಗಳನ್ನು ಚೆಕ್ ಮಾಡಿ ಲೋಪದೋಷಗಳು ಏನಾದರೂ ಅಂಥ ದೋಣಿಗಳನ್ನು ನಡೆಸಕೂಡದೆಂದು ಹೇಳಬೇಕು. ಈ ರೀತಿ ಅವರಿಗೆ ಹೇಳುವುದರಿಂದ ಇಂಥ ಘಟನೆಗಳು ಕೂಡ ತಪ್ಪುತ್ತವೆ. ಈಗ ಈ ದೋಣಿ ಮುಳುಗಿ ಸತ್ತಿರತಕ್ಕವರಿಗೆ ತಲಾ 10 ಸಾವಿರ ರೂ. ಗಳ ಪರಿಹಾರ ಧನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರಿ ಹೆಚ್. ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಖಾತೆ ಸಚಿವರು).--ಮಾನ್ಯ ಅಧ್ಯಕ್ಷರೇ, ಪ್ರವಾಹ ಕಾಲದಲ್ಲಿ ದೋಣಿಗಳು ಮುಳುಗಿ ಅಂಥ ಸಮಯದಲ್ಲಿ ಸಾವು ನೋವುಗಳಾದರೆ ಅದಕ್ಕೆ ಪರಿಹಾರವನ್ನು ಕೊಡಬೇಕೆಂದು ಕೇಳುವುದು ಸಹಜ. ಆದರೆ ಇಲ್ಲಿ ನಮ್ಮ ಇಲಾಖೆಗೂ, ದೋಣಿ ನಡೆಸುವುದಕ್ಕೂ ಸಂಬಂಧ ಇಲ್ಲ. ನಮ್ಮ ಇಲಾಖೆಯಿಂದ ದೋಣಿಗಳನ್ನು ನಡೆಸುವುದಿಲ್ಲ. ಇದು ತಮಗೇ ಗೊತ್ತಿದೆ. ದೋಣಿ ನಡೆಸುವವರು ಪ್ರತಿವರ್ಷ ಲೈಸೆನ್ಸನ್ನು ತೆಗೆದುಕೊಂಡು ದೋಣಿಗಳನ್ನು ನಡೆಸುತ್ತಾರೆ. ಈಗ ಅಲ್ಲಿ ಮುಳುಗಿ ಸತ್ತವರ ಕುಟುಂಬದವರಿಗೆ ಪರಿಹಾರವನ್ನು ಕೊಡಿಸುವ ಬಗ್ಗೆ ಪರಿಶೀಲಿಸುತ್ತೇವೆ. ಮತ್ತು ಸಂಬಂಧಪಟ್ಟವರಿಗೆ ನಾವು ಸೂಚನೆ ಕೊಡುತ್ತೇವೆ.

(iii) ಸಿಂದಿಗಿ ತಾಲ್ಲೂಕಿನ ಕಾಮ್ರೇಡ್ ಚಿಂಚೋಳಿಯವರು ಬಿಜಾಪುರಕ್ಕೆ ಹೋಗಿದ್ದಾಗ ಅವರ ಮೇಲೆ ಹಲ್ಲೆ ನಡೆದಿರುವ ಬಗ್ಗೆ

ಶ್ರೀ ಶಾಣಪ್ಪ ಭೇಮಪ್ಪಾ. ಕೆ. ಬಿ. (ಪಹಬಾದ್).--ಮಾನ್ಯ ಅಧ್ಯಕ್ಷರೆ, ನಮ್ಮ ಸಿಂದಿಗಿ ತಾಲ್ಲೂಕಿನಲ್ಲಿ ನಮ್ಮ ಪಕ್ಷದ ನಾಯಕರಾದ ಕಾಮ್ರೇಡ್ ಚಿಂಚೋಳಿಯವರು ಬಿಜಾಪುರಕ್ಕೆ ಹೋಗಿದ್ದಾಗ ಅವರ ಮೇಲೆ ಹಲ್ಲೆ ನಡೆದಿದೆ. ಕೆಲವು ಶ್ರೀಮಂತ ವರ್ಗದವರು ಕಳೆದ 10-15 ವರ್ಷಗಳಿಂದ ಈ ಭಾಗದಲ್ಲಿ ಅತಿ ಕ್ರೌರ್ಯ ರೀತಿಯಿಂದ ವರ್ತಿಸುತ್ತಿದ್ದಾರೆ. ಇದನ್ನು ಪ್ರತಿಭಟಿಸಿ ನಮ್ಮ ಮಾನ್ಯ ಚಿಂಚೋಳಿಯವರು ಪೋಲೀಸಿಗೆ ದೂರು ಕೊಟ್ಟಿದ್ದಾರೆ. ಮೊನ್ನೆ 5-2-84ರಂದು ಮಾನ್ಯ ಚಿಂಚೋಳಿಯವರು ಬಿಜಾಪುರಕ್ಕೆ ಹೋಗಿದ್ದಾಗ ಬಸವನಗೌಡ ಪಾಟೀಲ್ ಮತ್ತು ಅವರ ಸಂಬಂಧೀಕರಾದ ಸುಭಾಸ್ ಅಲಗೊಂಡ್ ಎನ್ನುವವರು ಚಿಂಚೋಳಿಯವರನ್ನು ಹಿಡಿದುಕೊಂಡು ಚೆನ್ನಾಗಿ ಹೊಡೆದು ನೀನು ನಿನ್ನ ಕಮ್ಯುನಿಸ್ಟ್ ಪಕ್ಷದ ಕೆಲಸವನ್ನು ಬಿಟ್ಟು ಬಿಡು ಇಲ್ಲದಿದ್ದರೆ ನಿನ್ನನ್ನು ಕೊಂದುಹಾಕುತ್ತೇವೆಂದು ಹೆದರಿಸಿದ್ದಾರೆ. ಈ ಬಗ್ಗೆ ತಮಗೆ ರಕ್ಷಣೆಯನ್ನು ನೀಡಬೇಕೆಂದು ಪೋಲಿಸ್ ಅಧಿಕಾರಿಗಳಿಗೆ ಪತ್ರವನ್ನು ಬರೆದಿರುವುದಲ್ಲದೆ ಮಾನ್ಯ ಮುಖ್ಯ ಮಂತ್ರಿಯವರಿಗೂ ಕೂಡ ಪತ್ರವನ್ನು ಬರೆದು ರಕ್ಷಣೆಯನ್ನು ಕೋರಿದ್ದಾರೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಅವರಿಗೆ ರಕ್ಷಣೆಯನ್ನು ಕೊಡಬೇಕೆಂದು ಕೇಳಿಕೊಂಡು ಸರ್ಕಾರದ ಗಮನವನ್ನು ಸೆಳೆದಿದ್ದೇನೆ.

ಶ್ರಿ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೆ, ಇದೊಂದೇ ಪ್ರಕರಣವನ್ನು ಗಮನದಲ್ಲಿಟ್ಟುಕೊಂಡು ಯಾರೂ ಮಾತನಾಡುವುದು ಬೇಡ. ಇತ್ತೀಚೆಗೆ ಯಾರು ಬಡ ರೈತರಿದ್ದಾರೆ, ಯಾರು ಯಾರು ಕಾರ್ಮಿಕರಿದ್ದಾರೆ ಅವರ ಮೇಲೆ ಇಂಥ ಪ್ರಕರಣಗಳು ಹೆಚ್ಚು ಹೆಚ್ಚು ನಡೆಯುತ್ತಿವೆ. ಇಲ್ಲಿ ವರ್ಗ ಭೇದ ನಡೆಯುತ್ತಿದೆ ಎಂಬುದು ಸತ್ಯ. ಆದರೆ ಇದರಲ್ಲಿ ನಾನು ರಾಜಕೀಯವನ್ನು ಮಾಡುವುದಕ್ಕೆ ಇಷ್ಟ ಪಡುವುದಿಲ್ಲ....

ಶ್ರೀ ಧರ್ಮಸಿಂಗ್‌ನಾರಾಯಣಸಿಂಗ್.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.--ತಾವು ಹಿರಿಯ ಸದಸ್ಯರಾಗಿದ್ದುಕೊಂಡು ಈ ರೀತಿ ಎದ್ದು ನಿಲ್ಲುವುದು ಸರಿಯಲ್ಲ.

Sri M. S. Krishanan.--I do not want to make politics here. But it is a fact that class distinction are going on in this fashion.

ಶ್ರೀ ಧರ್ಮಸಿಂಗ್‌ನಾರಾಯಣಸಿಂಗ್.--ಸ್ವಾಮಿ ನನ್ನ ಜೀವಗಿರಿ ತಾಲ್ಲೂಕಿನಲ್ಲಿ ಏನು ನಡೆಯುತ್ತಿದೆ ಎಂಬುದು ನನಗೆ ಗೊತ್ತಿದೆ. ಇವತ್ತು ಅಲ್ಲಿ ಪುಂಡಾಟಿಕೆ ನಡೆಯುತ್ತಿದೆ.

ಅಧ್ಯಕ್ಷರು.--ತಾವು ಇದರ ಮೇಲೆ ಮಾತನಾಡುವುದಕ್ಕೆ ಅವಕಾಶ ಇಲ್ಲ. ತಾವು ಮಾತನಾಡಬೇಕಾದರೆ ಬೇರೆ ನೋಟೀಸ್‌ನ್ನು ಕಳುಹಿಸಿಕೊಡಿ.

ಶ್ರೀ ಧರ್ಮಸಿಂಗ್.--ನಾರಾಯಣಸಿಂಗ್.—ನಾನು ಹೇಳುವುದಕ್ಕೆ ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು.-- ತಾವು ಈ ರೀತಿ ಮಾಡುವುದು ಸರಿಯಲ್ಲ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್ -- ಸ್ವಾಮಿ ಇದು ತುಂಡನೆ ಮಾಡತಕ್ಕ ರೀತಿಯಲ್ಲಿ ಇರುವುದರಿಂದ ಮಾನ್ಯ ಗೃಹಮಂತ್ರಿಗಳು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು .....

ಶ್ರೀ ರಮೇಶ ಜಿಗಜಿಣಗಿ.-- ಮಾನ್ಯ ಸಭಾಪತಿಯವರೇ, ಶಾಸರಕರಾದ ಶ್ರೀ ಶಾನಪ್ಪನವರು ಹಾಗೂ ಶ್ರೀ ಕೃಷ್ಣಪ್ಪನರನರು ಬಿಜಾಪುರ ಜಿಲ್ಲೆಯ ಸಿಂಧಿಗಿತಾಲ್ಲೂಕಿನಲ್ಲಿ ನಡೆದಂಥ ಘಟನೆಯ ಬಗ್ಗೆ ಪ್ರಸ್ತಾಪಮಾಡಿದ್ದಾರೆ ಇದು ಸರ್ಕಾರದ ಗಮನಕ್ಕೆ ಬಂದಿದೆ. ನಾನೂ ಕೂಡಾ ಇದೇ ಜಿಲ್ಲೆಯವನಾಗಿರುವುದರಿಂದ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪೋಲೀಸ್ ಅಧಿಕಾರಿಗಳಿಗೆ ಆದೇಶಿಸಿದ್ದೇನೆ.

10-00 A.M.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.-- ಸರ್ಕಾರಿ ಅಧಿಕಾರಿಗಳು ಕೊಟ್ಟ ವರದಿಯನ್ನು ಅವರು ಓದುತ್ತಿದ್ದಾರೆ

ಶ್ರೀ ರಮೇಶ ಜಿಗಜಿಣಗಿ.-- ಮಾನ್ಯ ಅಧ್ಯಕ್ಷರೇ, ಅವರೂ ಕೂಡಾ ಹಿಂದೆ ಮಂತ್ರಿಗಳು ಆಗಿದ್ದರು ಸರ್ಕಾರದ ಅಧಿಕಾರಿಗಳು ಕೊಟ್ಟಂಥ ವರದಿಯನ್ನು ಓದುತ್ತಿದ್ದರೋ ಅಥವಾ ಸ್ವತಃ ಓದುತ್ತಿದ್ದರೋ ಗೊತ್ತಿಲ್ಲ. ಇವೊತ್ತು ಈ ಘಟನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಚಿಂಚೋಳಿಯಲ್ಲಿ ಆನರಿಗೆ ರಕ್ಷಣೆ ಕೊಡುವುದಕ್ಕೆ ಜಿಲ್ಲಾ ಸೂಪರಿಟೆಂಡೆಂಟ್ ಆಫ್ ಪೋಲೀಸ್ ಆನರಿಗೆ ಕೂಡಲೇ ಸಂಪರ್ಕ ಮಾಡಿ ಹೇಳುತ್ತೇನೆ.

(iv) ಶಿವಮೊಗ್ಗಾ ಜಿಲ್ಲೆಯ ಕುಂಶಿಯಲ್ಲಿ ಮಲ್ಲಪ್ಪ ಎಂಬುವನು ತನ್ನ ಸೊಸೆ ಜಯಮ್ಮ ಎಂಬುನರ ಮೇಲೆ ಅತ್ಯಾಚಾರ ನಡೆಸಿ ನೇಣು ಹಾಕಿರುವ ಬಗ್ಗೆ.

ಶ್ರೀ ಆನಂದರಾವ್ -- ಶಿವಮೊಗ್ಗಾ ಜಿಲ್ಲೆಯ ಕುಂಶಿಯಲ್ಲಿ ತಾರೀಖು 11ರಂದು 45 ವರ್ಷದ ಫೈಲ್ವಾನ್ ಮಲ್ಲಪ್ಪ ಎಂಬುವನು ಆತನ ಸೊಸೆ ಜಯಮ್ಮ ಎಂಬುನರ ಮೇಲೆ ಅತ್ಯಾಚಾರ ನಡೆಸಿ ಅವಳನ್ನು ನೇಣು ಹಾಕಿದ್ದಾನೆಂದು ಗಲಾಟೆ ಆಗಿದೆ. ಆತನ ರಕ್ಷಣೆಗೆ ಕುಂಶಿ ಮಾಜಿ ಅಧ್ಯಕ್ಷರೊಬ್ಬರು ಪ್ರಭಾವ ಬೀರಿದ್ದಾರೆಂದು ಗೊತ್ತಾಗಿದೆ. ಒಮ್ಮೆ ನಾನು ಊರಿಗೆ ಭೇಟ ಕೊಟ್ಟಿದ್ದೆ. ಪರಿಶೀಲನೆ ಮಾಡಿದಾಗ, ಸುಮಾರು ಐದುನೂರರಿಂದ ಆರುನೂರು ಜನ ಈ ವ್ಯಕ್ತಿ ಬಹಳ ಕೆಟ್ಟ ನೀತಿಯುಳ್ಳವನು. ಆತ ಅತ್ಯಾಚಾರ ಮಾಡಿ ಕೊಲೆ ಮಾಡಿದ್ದಾನೆಂದು ಘೋಷಣೆ ಕೂಗುತ್ತಿದ್ದರು ಇದರ ಜೊತೆಗೆ ಆತನ ಅಣ್ಣ ಕೂಡಾ ಆತನ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾನೆ. ಈ ಊರಿನಲ್ಲಿ ಒಂದು ರೀತಿಯ ಭಯದವಾತಾವರಣ ಇದೆ. ಸರ್ಕಾರ ಈ ವಿಚಾರದಲ್ಲಿ ಕೂಡಲೇ ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ರಮೇಶ್ ಜಿಗಜಿಣಗಿ ಚಂದಪ್ಪ (ಗೃಹ ಇಲಾಖೆಯ ರಾಜ್ಯ ಸಚಿವರು) -- ಮಾನ್ಯ ಸಭಾಪತಿಗಳೇ ಈ ಒಂದು ಕೇಸಿನ ಬಗ್ಗೆ ನಮ್ಮ ಕುಂಶಿ ಪೋಲೀಸ್ ಸ್ಟೇಷನ್ನಿನಲ್ಲಿ ದೂರು ದಾಖಲಾಗಿದೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಇಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಕಾಯಿದೆ ಕಾನೂನು ಚೌಕಟ್ಟಿನಲ್ಲಿ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕೊ ಆ ರೀತಿಯ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ

ಶ್ರೀ ಬಿ. ಸ್ವಾಮಿರಾವ್.-- ಮಾನ್ಯ ಅಧ್ಯಕ್ಷರೇ, ಶಿವಮೊಗ್ಗಾ ಜಿಲ್ಲೆಯಲ್ಲಿ ಡಿ. ಎಲ್ ಆರ್. ಸಿ. ಕಮಿಟಿ ಏನು ನಡೆಯುತ್ತಿದೆ, ಅದರ ಬಗ್ಗೆ ಬಹಳ ಜನರ ಒಂದು ತೇಜೋವಧೆಯಾಗುತ್ತಾ ಇದೆ. ಶಿವಮೊಗ್ಗಾ ಜಿಲ್ಲೆಯಲ್ಲಿ ಜಿಲ್ಲಾ ಡಿ. ಎಲ್. ಆರ್. ಸಿ. ಕಮಿಟಿಯಲ್ಲಿ ಹಣ ಪಡೆದು ಆಭ್ಯರ್ಥಿಗಳನ್ನು ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಿಗೆ ಹಾಕುತ್ತಿದ್ದಾರೆ. ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆಯಾಗಿದೆ. ಈ ವಿಚಾರದಲ್ಲಿ ಹಿಂದಿನ ವಿಧಾನ ಸಭೆಯಲ್ಲಿ ನಾವು ಪ್ರಸ್ತಾಪ ಮಾಡಿದಾಗ ದಾಖಲೆ ಕೊಡಿ ಎಂದು ಕೇಳುತ್ತಾರೆ, ಯಾವ ರೀತಿಯ ದಾಖಲೆ ಕೊಡಬೇಕೋ ನನಗೆ ಗೊತ್ತಾಗುತ್ತಿಲ್ಲ ಇದು ಬಹಳ ನಾಚಿಕೆಗೇಡಿನ ಕೆಲಸ. ವಿದ್ಯಾಮಂತ್ರಿಗಳ ಹತ್ತಿರ ಹೋಗಿ ಹೇಳಿದಾಗ ನೀವು ಇಂದಿನದ್ದನ್ನು ಹಿಡಿದುಕೊಡಿ ಎಂದು ಹೇಳುತ್ತಾರೆಯೇ ವಿನಹ ಏನೂ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಶ್ರೀಮತಿ ಜಯಲಕ್ಷ್ಮಿ ಎನ್ನುವ ಹುಡುಗಿ ಮೊಸಲನೇ ದರ್ಜೆಯಲ್ಲಿ ಪಾಸಾಗಿದ್ದು, ಅವಳನ್ನು ಆರು ಸಾವಿರ ರೂಪಾಯಿಗಳ ಲಂಚ ಕೊಟ್ಟರೆ ಕೆಲಸ ಕೊಡುವುದಾಗಿ ಹೇಳಿದ್ದಾರಂತೆ. ಆಕೆ ನನಗೆ ಒಂದು ಕಾಗದ ಬರೆದು ತಿಳಿಸಿದ್ದಾರೆ. ಈ ತರಹ ಮೋಸ ನಡೆಯುತ್ತಿದೆ. ಆದ್ದರಿಂದ ತಾವು ಕೂಡಲೆ ಈ ಕಮಿಟಿಯನ್ನು ವಜಾ ಮಾಡಿ, ಹಲವಾರ,